ಆ) 1995-96ನೇ ಸಾಲಿನಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಆಯವ್ಯಯ ದಡಿಯಲ್ಲಿ ಈ ಸಂಸ್ಥೆಗೆ ರೂ. 20,00,000ಗಳನ್ನು ಒದಗಿಸಲಾಗಿದೆ.

ಇ) 1995-96ನೇ ಸಾಲಿನಲ್ಲಿ ಶ್ರೀ ಡಿ. ದೇವರಾಜ್ ಅರಸ್‌ರವರ 80ನೇ ಜನ್ಮ ದಿನಾಚರಣೆಯನ್ನು ಸಾರ್ವಜನಿಕ ಕಾರ್ಯಕ್ರಮವಾಗಿ 1995ನೇ ಆಗಸ್ಟ್ ಮಾಹೆಯಲ್ಲಿ ಆಚರಿಸಲಾಯಿತು. ಹಾಗೂ ಶ್ರೀ ಡಿ. ದೇವರಾಜ್ ಅರಸ್ ಪ್ರಶಸ್ತಿಯನ್ನು ಶ್ರೀ ವಿದ್ಯಾಧರ ಗುರೂಜಿ ಇವರಿಗೆ ಪ್ರದಾನ ಮಾಡಲಾಗಿರುತ್ತದೆ.

ಉತ್ತರಕನ್ನಡ ಜಿಲ್ಲೆಯಲ್ಲಿ 'ಕುಣಬಿ' ಜನಾಂಗದ ಸಮಗ್ರ ಅಭಿವೃದ್ಧಿಗಾಗಿ ಒಂದು ಕಾರ್ಯಗಾರವನ್ನು ನಡೆಸಲು ಕ್ರಮ ವಹಿಸಲಾಯಿತು.

ಅಲ್ಪಸಂಖ್ಯಾತರು ಹೆಚ್ಚಾಗಿರುವ ಬೀದರ್, ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಅವರ ಸಮಗ್ರ ಅಭಿವೃದ್ಧಿಗಾಗಿ ವ್ಯಾಪಕ ಯೋಜನೆಯ ಐ.ಎಸ್.ಇ.ಸಿ ಬೆಂಗಳೂರಿನ ಸಂಸ್ಥೆಯ ಮೂಲಕ ಕ್ರಮ ವಹಿಸಲಾಯಿತು.

ಈ) ಇಲ್ಲ.

ಉ) 1996-97ನೇ ಸಾಲಿಗೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಆಯವ್ಯಯದಡಿಯಲ್ಲಿ ಈ ಸಂಸ್ಥೆಗೆ ರೂ. 20,00,000-00ಗಳನ್ನು ಒದಗಿಸಲಾಗಿರುತ್ತದೆ.

ಊ) ಈ ಸಂಸ್ಥೆಯ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಅಧಿಕಾರೇತರರೊಬ್ಬರನ್ನು ನಿರ್ದೇಶಕರ ಹುದ್ದೆಗೆ ನೇಮಕ ಮಾಡಲಾಗುತ್ತದೆ. ಇದಲ್ಲದೆ ಅಧಿಕಾರರೇತರದಿಂದ ಕೂಡಿದ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿರುವುದಿಲ್ಲ.

ವಿಷಯ:- ರಾಜ್ಯದಲ್ಲಿರುವ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ.

1394 (2060) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೆಪಲ್ಲಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಹಾಸ್ಟೆಲ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಈ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರಲು ಕಾರಣವೇನು?

ಆ) ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಇ) ರಾಜ್ಯದ ಅನೇಕ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಲ್ಲದೇ ಇರುವವರು ಹೆಚ್ಚಿನ ಸಂಖ್ಯೆ ಇರುವುದು, ಅವರುಗಳು ಬೇರೆ ರೀತಿಯ ಚಟುವಟಿಕೆಗಳಲ್ಲಿ ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ರಾಜ್ಯದಲ್ಲಿ ನಡೆಯುತ್ತಿರುವ ಪರಿಶಿಷ್ಟ ಜಾತಿ :

ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಲ್ಲಿ 85,697 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾರೆ. ಈ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರಲು ಕಾರಣ ಕೆಳಕಂಡಂತಿದೆ:

1) ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ಪ್ರವೇಶಕ್ಕಾಗಿ ಕೋರಿ ಸಾಕಷ್ಟು ಅರ್ಜಿಗಳು ಬಂದಿರುವುದಿಲ್ಲ.

2) ಪರಿಶಿಷ್ಟ ವರ್ಗದ ಮಕ್ಕಳ ಸಂಖ್ಯೆ ಹಾಡಿಗಳಲ್ಲಿ ಕಡಿಮೆ ಇದ್ದು ಹಾಗೂ ವಲಸೆ ಹೋಗುವುದರಿಂದ ಕೊಡಗು ಜಿಲ್ಲೆಯಲ್ಲಿ ಕಡಿಮೆ ಇರುತ್ತದೆ.

3) ಉತ್ತರ ಕನ್ನಡ:ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ವಿರಳವಾಗಿರುವುದರಿಂದ ಮಂಜೂರಾತಿ ಸಂಖ್ಯೆ ಭರ್ತಿಯಾಗಿರುವುದಿಲ್ಲ.

4) ಕಳೆದ ಸಾಲಿನಲ್ಲಿ ಮಂಜೂರಾದ ಕೆಲವು ವಿದ್ಯಾರ್ಥಿನಿಲಯಗಳಿಗೆ ಇನ್ನೂ ಪ್ರವೇಶ ಪ್ರಕ್ರಿಯೆ ಆಗಬೇಕಾಗಿರುತ್ತದೆ.

5) ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಅರ್ಜಿ ಕರೆದಿದ್ದು ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ.

ಆ) ಹೌದು, 1996-97ನೇ ಸಾಲಿನಲ್ಲಿ ಹಣದ ಲಭ್ಯತೆ ವಿದ್ಯಾರ್ಥಿನಿಲಯದಲ್ಲಿರುವ ಸ್ಥಳಾವಕಾಶ ಇತರೇ ಸೌಕರ್ಯಗಳನ್ನು ಪರಿಶೀಲಿಸಿ 5000 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಂಖ್ಯೆಯನ್ನು ಮೆಟ್ರಿಕ್ ಪೂರ್ವ: ವಿದ್ಯಾರ್ಥಿನಿಲಯದಲ್ಲಿ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು, ಬೆಂಗಳೂರು ನಗರದ ಕೆಲವು ಹಾಸ್ಟೆಲ್‌ಗಳಲ್ಲಿರುವುದು ಗಮನಕ್ಕೆ ಬಂದಿದೆ. ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತ ವ್ಯಕ್ತಿಗಳಿರುವುದನ್ನು ಗಮನಿಸಲಾಗಿದೆ. ಈ ಸಮಸ್ಯೆಯು ಬೆಂಗಳೂರು ನಗರ ಜಿಲ್ಲೆಯಲ್ಲಿ ಇರುವುದು ಕಂಡುಬಂದಿದೆ. ಮೈಸೂರು ಜಿಲ್ಲೆಯಲ್ಲಿ ಕೆಲವು ಅಪರಿಚಿತರು ಮತ್ತು ಸಮಾಜ ಘಾತುಕ ವ್ಯಕ್ತಿಗಳು ಹೊರಗಿನಿಂದ ಬಂದು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಮಾಡಿದ್ದಾರೆ. ಆದುದರಿಂದ, ಈ ವಿದ್ಯಾರ್ಥಿಗಳಿಗೆ ಸಂರಕ್ಷಣೆಯನ್ನು ನೀಡಲು 80 ಗೃಹ ರಕ್ಷಕ ದಳದವರನ್ನು ನಿಯೋಜಿಸಲು ಸೂಕ್ತ ಕ್ರಮ ಜರುಗಿಸಿದೆ.

ಬೆಂಗಳೂರು ನಗರದ ಪ್ರಿಮ್‌ರೋಡ್ ರಸ್ತೆಯಲ್ಲಿರುವ ಕಲಾ ಕಾಲೇಜು ವಿದ್ಯಾರ್ಥಿ ನಿಲಯದಲ್ಲಿ 200ಕ್ಕಿಂತ ಹೆಚ್ಚಿನ ವ್ಯಕ್ತಿಗಳು ಅನಧಿಕೃತವಾಗಿ ವಾಸವಾಗಿದ್ದಾರೆ. ಅದರಂತೆ ವಿಜ್ಞಾನ ಕಾಲೇಜು ವಿದ್ಯಾರ್ಥಿ ನಿಲಯದಲ್ಲಿ 100ಕ್ಕಿಂತ ಹೆಚ್ಚು ಮಂದಿ ಅನಧಿಕೃತವಾಗಿ ವಾಸವಾಗಿರುತ್ತಾರೆ. ಇವರುಗಳನ್ನು ಹೊರಹಾಕಲು ಭದ್ರತಾ ಸಿಬ್ಬಂದಿಯನ್ನು ನೇಮಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ವಿತರಣೆ ಮಾಡಲಾಗುವುದು.